# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು -02.

O/o. Joint Director Building Licenses (South) *

ಸಂಖ್ಯೆ: ಜಂನಿನಯೋ(ದ)/ಪ್ರಾ.ಪ/ಸನಿ/15/2020-21

ದಿನಾಂಕ: 17-12-2020.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಖಾತಾ ಸಂಖ್ಯೆ: 1469, ಸರ್ವೆ ಸಂಖ್ಯೆ 90, ಅರಕೆರೆ ಗ್ರಾಮ, ಬೇಗೂರು ಹೋಬಳಿ, ಬೊಮ್ಮನಹಳ್ಳಿ ವಲಯ, ವಾರ್ಡ್ ನಂ. 193, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಕ್ಲಬ್‌ಹೌಸ್ ಒಳಗೊಂಡ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ಅರ್ಜಿದಾರರ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುವ ಮನವಿ ದಿನಾಂಕ: 13-05-2019.
2) ನಕ್ಷೆ ಮಂಜೂರಾತಿ ಸಂಖ್ಯೆ: BBMP/ Addl.Dir/JD South/ 0149/16-17 ದಿನಾಂಕ: 26-07-2017.
3) ಮಾನ್ಯ ಆಯುಕ್ತರು ರವರ ಅನುಮೋದನೆ ದಿನಾಂಕ: 02-12-2020.

*****

ಖಾತಾ ಸಂಖ್ಯೆ: 1469, ಸರ್ವೆ ಸಂಖ್ಯೆ 90, ಅರಕೆರೆ ಗ್ರಾಮ, ಬೇಗೂರು ಹೋಬಳಿ, ಬೊಮ್ಮನಹಳ್ಳಿ ವಲಯ, ವಾರ್ಡ್ ನಂ. 193, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ 2ತಳ+ ನೆಲ+ಮೇಲಿನ 6 ಅಂತಸ್ತುಗಳ 174 ಘಟಕಗಳುಳ್ಳ ಕ್ಲಬ್‌ಹೌಸ್ ಒಳಗೊಂಡ ವಸತಿ ಸಮುಚ್ಚಯ ಕಟ್ಟಡಕ್ಕೆ ಎಲ್.ಪಿ. ಸಂಖ್ಯೆ: BBMP/ Addl.Dir/JD South/ LP/0149/16-17 ದಿನಾಂಕ: 26-07-2017 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ಉಲ್ಲೇಖ (1) ರ ಮನವಿಗೆ ಸಂಬಂಧಿಸಿದಂತೆ, ಕ್ಲಬ್‌ಹೌಸ್ ಒಳಗೊಂಡ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 08-10-2020 ರಂದು ಸ್ಥಳ ಪರಿಶೀಲಿಸಲಾಗಿ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಿದ್ದು, ಸದರಿ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಮಾನ್ಯ ಆಯುಕ್ತರು ರವರು ಅನುಮೋದನೆ ನೀಡಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 15,80,000/-ಗಳನ್ನು ಅರ್ಜಿದಾರರಿಂದ ರಸೀದಿ ಸಂಖ್ಯೆ: RE-ifms624-TP/000080 ದಿನಾಂಕ: 16-12-2020 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ಕ್ಲಬ್‌ಹೌಸ್ ಒಳಗೊಂಡ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ನಕ್ಷೆ ಮಂಜೂರಾತಿ ಪಡೆದ ದಿನಾಂಕದಿಂದ ಐದು ವರ್ಷದೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

17/12/2020

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(2) Copies 18/12/2020

TS 17/12/2020   17/12/2020   17/12/2020

5) ನಕ್ಷೆ ಮಂಜೂರಾತಿ ನೀಡುವ ಸಮಯದಲ್ಲಿ ವಿಧಿಸಲಾಗಿರುವಂತೆ, ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ಮುನ್ನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವುದು.

6) ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ರಂತೆ ನಿರ್ವಹಿಸುವುದು.

7) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.

8) ಅರ್ಜಿದಾರರು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

9) ಅರ್ಜಿದಾರರು ಪ್ರತಿ 240.00 ಚ.ಮೀ ಅನುಪಾತ ವಿಸ್ತೀರ್ಣಕ್ಕೆ ಒಂದರಂತೆ ಗಿಡವನ್ನು ನೆಡುವುದು.

ಸಹಿ/-
ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ

M/s. Perody Builders Pvt. Ltd.,
Rep by its Partner
P. Ramakanth Shetty & Others
# 999/A, G-1, Mulki Sundaram Shetty Nagar
Vijaya Bank Layout,
Bannerghatta Road
Bangalore – 560 076.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಕೆರೆ ಉಪ ವಿಭಾಗ ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ